ನೆಲಮಂಗಲ ಯೋಜನಾ ಪ್ರಾಧಿಕಾರ

2022–23ನೇ ಸಾಲಿನ ವಾರ್ಷಿಕ ವರದಿ

(ದಿನಾಂಕ:01–04–2022 ರಿಂದ 31–03–2023 ರವರೆಗೆ)

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

Web: www.nelamangala.tpa.gov.in

ಪ್ರಸ್ತಾವನೆ (Introduction)

ನೆಲಮಂಗಲ ಯೋಜನಾ ಪ್ರಾಧಿಕಾರವು ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟು ಕಾರ್ಯ ನಿರ್ವಹಿಸುವ ಸ್ವಾಯತ್ತ ಸಂಸ್ಥೆಗಳಲ್ಲಿ ಒಂದಾಗಿದ್ದು, ಈ ಪ್ರಾಧಿಕಾರದ ಕಛೇರಿ, 2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ನೂತನವಾಗಿ ನಿರ್ಮಿಸಿರುವ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಾಧಿಕಾರದ ಅಧ್ಯಕ್ಷರು ಕಛೇರಿಯ ಮುಖ್ಯಸ್ಥರಾಗಿದ್ದು, ಸದಸ್ಯ–ಕಾರ್ಯದರ್ಶಿಗಳು, ಪ್ರಾಧಿಕಾರದ ಎಲ್ಲಾ ಕಾರ್ಯ ಚಟುವಟಿಕೆಗಳ ಸಂಬಂಧ ಕಾರ್ಯ ನಿರ್ವಹಣಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ನೆಲಮಂಗಲ ಯೋಜನಾ ಪ್ರಾಧಿಕಾರದ ಕಾರ್ಯಾರಂಭದ ಬಗ್ಗೆ

ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿನ ಪ್ರಾಧಿಕಾರಗಳಲ್ಲಿ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶವು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉತ್ತರ–ಪಶ್ಚಿಮ (ವಾಯುವ್ಯ) ಭಾಗದಲ್ಲಿರುತ್ತದೆ. ಈ ಮೊದಲು ಸರ್ಕಾರದಿಂದ ಅನುಮೋದಿಸಿದ ರಚನಾ ನಕ್ಷೆಯಂತೆ APZ–2 ಮತ್ತು IZ-2(ಪಿ) ಹಾಗೂ 3(ಪಿ) ರಲ್ಲಿ ಬರುತ್ತಿದ್ದು, ಸದರಿ ಪ್ರದೇಶದಲ್ಲಿ ಬೆಳವಣಿಗೆಗಳನ್ನು ನೇರವಾಗಿ ಬಿ.ಎಂ.ಆರ್.ಡಿ.ಎ ಕಾಯ್ದೆಯಡಿಯಲ್ಲಿ ನಿಯಂತ್ರಿಸಲಾಗುತ್ತಿತ್ತು. ನಂತರದಲ್ಲಿ ಸರ್ಕಾರದಿಂದ ಅನುಮೋದಿತ ರಚನಾ ನಕ್ಷೆಯಂತೆ ಸದರಿ ಪ್ರದೇಶವನ್ನು ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶವಾಗಿ ಘೋಷಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಎ) ರಂತೆ ಸರ್ಕಾರದ ಆದೇಶ ಸಂ.ನಅಇ:63:ಟಿಟಿಪಿ:1996 ದಿನಾಂಕ:27–01–1997 ರಂತೆ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿದ್ದು, ಸದರಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ನೆಲಮಂಗಲ ತಾಲ್ಲೂಕಿನ 243 ಗ್ರಾಮಗಳು, ಬೆಂಗಳೂರು ಉತ್ತರ ತಾಲ್ಲೂಕಿನ 42 ಗ್ರಾಮಗಳು ಮತ್ತು ಮಾಗಡಿ ತಾಲ್ಲೂಕಿನ 60 ಗ್ರಾಮಗಳು ಸೇರಿ ಒಟ್ಟು 345 ಗ್ರಾಮಗಳು ಇದ್ದು, ಸದರಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವು 735 ಚ.ಕಿ.ಮೀ (73408.85 ಹೆಕ್ಟೇರ್) ಇರುತ್ತದೆ.

ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕಿನ 37 ಗ್ರಾಮಗಳನ್ನು ಹೆಚ್ಚುವರಿಯಾಗಿ ಸೇರಿಸಿ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ.ನಅಇ:141:ಬಿಎಂಆರ್:2015 ದಿನಾಂಕ:08–12–2015 ರಲ್ಲಿ ಘೋಷಿಸಲಾಗಿದ್ದು, ಸದರಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ನೆಲಮಂಗಲ ತಾಲ್ಲೂಕಿನ 243 ಗ್ರಾಮಗಳು, ಬೆಂಗಳೂರು ಉತ್ತರ ತಾಲ್ಲೂಕಿನ 42 ಗ್ರಾಮಗಳು, ಮಾಗಡಿ ತಾಲ್ಲೂಕಿನ 60 ಗ್ರಾಮಗಳು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ 37 ಗ್ರಾಮಗಳು ಒಳಗೊಂಡಂತೆ ಒಟ್ಟು 382 ಗ್ರಾಮಗಳು ಇದ್ದು, ಸದರಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವು 830.41 ಚ.ಕಿ.ಮೀ (83041.70 ಹೆಕ್ಟೇರ್) ಇರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ.ನಅಇ:36:ಬಿಎಂಆರ್:2016 ದಿನಾಂಕ:24–06–2016 ರಲ್ಲಿ ಉಪನಗರ ವರ್ತುಲ ರಸ್ತೆ (ಎಸ್‌ಟಿಆರ್‌ಆರ್) ಸ್ಥಳೀಯ ಯೋಜನಾ ಪ್ರದೇಶ ಅಧಿಸೂಚನೆಯಾಗಿದ್ದು, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ 64 ಪೂರ್ಣ ಗ್ರಾಮಗಳು ಮತ್ತು 01 ಭಾಗಶಃ ಗ್ರಾಮ ಸದರಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿಸಿಕೊಂಡ ನಂತರ, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದಲ್ಲಿ ನೆಲಮಂಗಲ ತಾಲ್ಲೂಕಿನ 205 ಗ್ರಾಮಗಳು, ಬೆಂಗಳೂರು ಉತ್ತರ ತಾಲ್ಲೂಕಿನ 42 ಗ್ರಾಮಗಳು, ಮಾಗಡಿ ತಾಲ್ಲೂಕಿನ 34 ಗ್ರಾಮಗಳು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ 37 ಗ್ರಾಮಗಳು ಸೇರಿ ಒಟ್ಟು 318 ಗ್ರಾಮಗಳು ಉಳಿದಿರುತ್ತದೆ. ಸದರಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವು 689 ಚ.ಮೀ (68880.15) ಹೆಕ್ಟೇರ್ ಇರುತ್ತದೆ.

ತದನಂತರ ಸರ್ಕಾರದ ಅಧಿಸೂಚನೆ –II ಸಂಖ್ಯೆ.ನಅಇ:95:ಬಿಎಂಆರ್:2016 ದಿನಾಂಕ:30–11–2017 ರಲ್ಲಿ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶ ಅಧಿಸೂಚನೆಯಾಗಿದ್ದು, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ದೊಡ್ಡಬಳ್ಳಾಪುರ ತಾಲ್ಲೂಕಿನ 37 ಗ್ರಾಮಗಳು ಸದರಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿಸಿಕೊಂಡ ನಂತರ, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಪ್ರಸ್ತುತ ನೆಲಮಂಗಲ

ತಾಲ್ಲೂಕಿನ 205 ಗ್ರಾಮಗಳು, ಬೆಂಗಳೂರು ಉತ್ತರ ತಾಲ್ಲೂಕಿನ 42 ಗ್ರಾಮಗಳು ಮತ್ತು ಮಾಗಡಿ ತಾಲ್ಲೂಕಿನ 34 ಗ್ರಾಮಗಳು ಸೇರಿ ಒಟ್ಟು 281 ಗ್ರಾಮಗಳು ಇರುತ್ತವೆ.

ಸರ್ಕಾರದ ಆದೇಶ ಸಂಖ್ಯೆ.ನಅಇ:204:ಟಿಟಿಪಿ:97 ದಿನಾಂಕ:14–07–1997 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಸಿ) ರಂತೆ ನೆಲಮಂಗಲ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ. ಅದರಂತೆ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರನ್ನು ಅಧ್ಯಕ್ಷರನ್ನಾಗಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರನ್ನು ಸದಸ್ಯ–ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿತ್ತು. ತದನಂತರ ಸರ್ಕಾರದ ಆದೇಶ ಸಂಖ್ಯೆ.ನಅಇ:83:ನಯೋಸೇ:2009 ಬೆಂಗಳೂರು ದಿನಾಂಕ:25–06–2009 ರಲ್ಲಿ ಪ್ರಾಧಿಕಾರದ ಸದಸ್ಯ–ಕಾರ್ಯದರ್ಶಿಗಳನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರ ಹುದ್ದೆಗೆ ಉನ್ನತೀಕರಿಸಿ ಆದೇಶಿಸಿರುವ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ.ನಅಇ:93:ನಯೋಸೇ:2009 ಬೆಂಗಳೂರು ದಿನಾಂಕ:26–08–2009 ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರನ್ನು ಸದಸ್ಯ–ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ:87:ಬಿಎಂಆರ್:2019 (ಇ–ಆಫೀಸ್) ದಿನಾಂಕ:22–10–2019, ಸಂಖ್ಯೆ:ನಅಇ:23:ಬಿಎಂಆರ್:2022(ಇ) ದಿನಾಂಕ:09–03–2022, ಸಂಖ್ಯೆ:ನಅಇ:29:ಬಿಎಂಆರ್:2022 (ಇ) ದಿನಾಂಕ:19–04–2022 ಸಂಖ್ಯೆ:ನಅಇ:131:ಬಿಎಂಆರ್:2022 (ಇ) ದಿನಾಂಕ:20–01–2023 ರಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡಿ ಆದೇಶಿಸಲಾಗಿದ್ದು, ಸದರಿ ಸಾಲಿನಲ್ಲಿ ದಿನಾಂಕ:01–04–2022 ರಿಂದ 31–01–2023 ರವರೆಗೆ ಕೆಳಕಂಡ ಅಧ್ಯಕ್ಷರು ಹಾಗೂ ಸದಸ್ಯರು ಕಾರ್ಯನಿರ್ವಹಿಸಿರುತ್ತಾರೆ.

ಕ್ರ.ಸಂ.	ಹುದ್ದೆ	ಹೆಸರು	ಕಾರ್ಯನಿರ್ವಹಿಸಿದ ಅವಧಿ
1.	ಅಧ್ಯಕ್ಷರು	1) ಶ್ರೀ.ಎಸ್.ಮಲ್ಲಯ್ಯ	ದಿ:01–04–2022 ರಿಂದ 31–03–2023
2.	ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು	1) ಶ್ರೀಮತಿ.ಎನ್.ವೀಣಾ 2) ಶ್ರೀ.ಟಿ.ಎಲ್.ಲಕ್ಷ್ಮೀಪತಿ	ದಿ:01–04–2022 ರಿಂದ 15–03–2023 ದಿ:15–03–2023 ರಿಂದ 31–03–2023
3.	ಸದಸ್ಯರು	1) ಉಪ ವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ, ಬೆಂಗಳೂರು ಉತ್ತರ ಮತ್ತು ರಾಮನಗರ ಉಪ ವಿಭಾಗಗಳು	ದಿ:01–04–2022 ರಿಂದ 31–03–2023
		2) ಯೋಜನಾ ಪ್ರಾಧಿಕಾರದ ವ್ಯಾಪ್ತಿಯೊಳಗೆ ಬರುವ ಸ್ಥಳೀಯ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು	ದಿ:01–04–2022 ರಿಂದ 31–03–2023
		3) ಶ್ರೀ.ಜಿ.ನಾಗರಾಜು	ದಿ:25–04–2022 ರಿಂದ 31–03–2023
		4) ಶ್ರೀ.ಸಿ.ಎಲ್.ಜಗದೀಶ್ ಪ್ರಸಾದ್	ದಿ:25–04–2022 ರಿಂದ 31–03–2023
		5) ಶ್ರೀ.ಎಂ.ಎನ್.ರಾಮ್	ದಿ:25–04–2022 ರಿಂದ 31–03–2023
		6) ಶ್ರೀ.ಶಿವಕುಮಾರ್.ಕೆ.ಎಂ	ದಿ:21–01–2023 ರಿಂದ 31–03–2023

ನೆಲಮಂಗಲ ಯೋಜನಾ ಪ್ರಾಧಿಕಾರದ ಸಂಕ್ಷಿಪ್ತ ವರದಿ:

ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶವು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ 205 ಗ್ರಾಮಗಳು, ಬೆಂಗಳೂರು ನಗರ ಜಿಲ್ಲೆಯ ಉತ್ತರ ತಾಲ್ಲೂಕಿನ 42 ಗ್ರಾಮಗಳು ಮತ್ತು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ 34 ಗ್ರಾಮಗಳನ್ನು ಒಳಗೊಂಡಿರುತ್ತದೆ. ಸದರಿ ಯೋಜನಾ ಪ್ರದೇಶದ ಉತ್ತರಕ್ಕೆ ತುಮಕೂರು ಜಿಲ್ಲೆ ದಕ್ಷಿಣಕ್ಕೆ ಮಾಗಡಿ ತಾಲ್ಲೂಕಿನ ಉಳಿಕೆ ಪ್ರದೇಶ ಪೂರ್ವಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕು ಹಾಗೂ ಬೆಂಗಳೂರು ಉತ್ತರ ತಾಲ್ಲೂಕಿನ ಉಳಿಕೆ ಪ್ರದೇಶ ಮತ್ತು ಪಶ್ಚಿಮಕ್ಕೆ ತುಮಕೂರು ಜಿಲ್ಲೆ ಹಾಗೂ ಮಾಗಡಿ ತಾಲ್ಲೂಕಿನ ಉಳಿಕೆ ಪ್ರದೇಶಗಳು. ನೆಲಮಂಗಲ ಪಟ್ಟಣವು ಬೆಂಗಳೂರಿನಿಂದ 30 ಕಿ.ಮೀ ದೂರದಲ್ಲಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿ NH-4 ಮತ್ತು NH-48 ಬೆಂಗಳೂರು–ಹುಬ್ಬಳ್ಳಿ, ಬೆಂಗಳೂರು–ಹಾಸನ ರೈಲ್ವೆ ಮಾರ್ಗಗಳು ಹಾದು ಹೋಗುತ್ತವೆ.

ಪ್ರಾಧಿಕಾರದ ಕಾರ್ಯ ಚಟುವಟಿಕೆಗಳು

1. ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾ ಯೋಜನೆ ತಯಾರಿಕೆ: ಯೋಜನಾ ಪ್ರದೇಶದ ವ್ಯಾಪ್ತಿಯೊಳಗೆ ಬರುವ ಪಟ್ಟಣ ಮತ್ತು ಅಭಿವೃದ್ಧಿ ಪಥದಲ್ಲಿ ಇರುವ ಗ್ರಾಮಗಳ ಭೌತಿಕ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿ ಮಹಾ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಂತೆ ಈ ಮಹಾ ಯೋಜನೆಯನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮುಖಾಂತರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವುದು ಹಾಗೂ ಅನುಷ್ಠಾನ ಗೊಳಿಸುವುದು.
2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಸಂಬಂಧಿಸಿದ ಇಲಾಖೆ ಮತ್ತು ಸಂಸ್ಥೆಗಳಿಗೆ ತಾಂತ್ರಿಕ ನೆರವು ಮತ್ತು ಅಭಿಪ್ರಾಯ ನೀಡುವುದು.
3. ವ್ಯವಸಾಯ ಭೂಮಿಯನ್ನು ವ್ಯವಸಾಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ತಾಂತ್ರಿಕ ಅಭಿಪ್ರಾಯ ನೀಡುವುದು.
4. ಭೂ ಪರಿವರ್ತನೆ ಆಗಿರುವ ಜಮೀನುಗಳಿಗೆ ವಸತಿ, ವಾಣಿಜ್ಯ, ಕೈಗಾರಿಕೆ ಮತ್ತು ಇತರೆ ಉದ್ದೇಶದ ವಿನ್ಯಾಸ ಅನುಮೋದನೆ ನೀಡುವುದು ಮತ್ತು ಕಟ್ಟಡವನ್ನು ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು.

ಪ್ರಾಧಿಕಾರದ ಕಾರ್ಯ ವಿಧಾನ ಮತ್ತು ಕರ್ತವ್ಯಗಳು

ಕ್ರ.ಸಂ.	ಅಧ್ಯಕ್ಷರು	ಸದಸ್ಯ–ಕಾರ್ಯದರ್ಶಿ	ಸದಸ್ಯರು
1.	ಕರ್ನಾಟಕ ಯೋಜನಾ ಪ್ರಾಧಿಕಾರ ಗಳ ನಿಯಮಗಳು, 1965 ರನ್ವಯ ಪ್ರಾಧಿಕಾರದ ಸಭೆಯನ್ನು ಏರ್ಪಡಿಸುವುದು.	1. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ–4 (ಹೆಚ್) ರಂತೆ ಸಭೆಯ ನಿರ್ಣಯದಂತೆ ಕೆಲಸ ನಿರ್ವಹಿಸುವುದು. 2. ಪ್ರಾಧಿಕಾರದ ದೈನಂದಿನ ಕೆಲಸ ನಿರ್ವಹಣೆ ಮಾಡುವುದು. 3. ಮಹಾಯೋಜನೆ ತಯಾರಿಕೆ ಕೆಲಸ ಮಾಡುವುದು. 4. ಸರ್ಕಾರದ / ಬೆಂಗಳೂರು ಪ್ರದೇಶಾಬಿವೃದ್ಧಿ ಪ್ರಾಧಿಕಾರದ ಹಂತದಲ್ಲಿ ನಡೆಯುವ ಸಭೆಗಳಲ್ಲಿ ಭಾಗವಹಿಸುವುದು.	ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿ ನಿರ್ಣಯ ಕೈಗೊಳ್ಳುವುದು.

		5. ಕಂದಾಯ ಇಲಾಖೆಯಿಂದ ಸ್ವೀಕರಿಸಲಾಗುವ ಭೂ ಪರಿವರ್ತನೆ ಪ್ರಕರಣಗಳನ್ನು ನಿರ್ವಹಿಸುವುದು. 6. ನಗರಸಭೆ / ಪಂಚಾಯಿತಿಯಿಂದ ಸ್ವೀಕರಿಸಲಾಗುವ ಕಟ್ಟಡ ಪರವಾನಿಗೆಗಳಿಗೆ ತಾಂತ್ರಿಕ ಅಭಿಪ್ರಾಯ / ಪ್ರಾರಂಭಿಕ ಪ್ರಮಾಣ ಪತ್ರ ನೀಡುವುದು.	

ಕರ್ತವ್ಯ ನಿರ್ವಹಣೆಗಾಗಿ ನಿಗದಿಪಡಿಸಲಾದ ಸೂತ್ರಗಳು

ಪ್ರಾಧಿಕಾರದ ಕಾರ್ಯನಿರ್ವಹಣೆಯು ವಿವಿಧ ಕಾಯ್ದೆಗಳಲ್ಲಿ ನೀಡಿರುವ ಸೂಚನೆಗಳಂತೆ ಸರ್ಕಾರದಿಂದ ಜಾರಿಗೊಳಿಸಲಾದ ಆದೇಶಗಳು, ಸುತ್ತೋಲೆಗಳು ಮತ್ತು ವಿವಿಧ ಹಂತಗಳಲ್ಲಿ ಸಭೆಗಳಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಸರಿಸಿ ಕರ್ತವ್ಯಗಳನ್ನು ನಿರ್ವಹಿಸಲಾಗುತ್ತದೆ.

ಪ್ರಾಧಿಕಾರದಲ್ಲಿ ಈ ಕೆಳಕಂಡ ನಿಯಮ/ ಕಾಯ್ದೆಗಳನ್ನು ಪರಿಗಣಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ

a) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961.

b) ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965.

c) ಬಿ.ಎಂ.ಆರ್.ಡಿ.ಎ ಕಾಯ್ದೆ.

d) ಕೆ.ಸಿ.ಎಸ್.ಆರ್, ನಿಯಮ 1957.

ಪ್ರಾಧಿಕಾರದ ಕಛೇರಿಯ ಅಧೀನದಲ್ಲಿ ಲಭ್ಯವಿರುವ ದಸ್ತಾವೇಜುಗಳು

1) ಅನುಮೋದಿತ ಮಧ್ಯಂತರ ಮಹಾ ಯೋಜನೆ (Interim Master Plan) ನಕ್ಷೆಗಳು ಹಾಗೂ ವರದಿ.
2) ಅನುಮೋದಿತ ಮಹಾ ಯೋಜನೆ –2031 (Master Plan–2031) ನಕ್ಷೆಗಳು ಹಾಗೂ ವರದಿ.
3) ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಗ್ರಾಮಗಳ ನಕ್ಷೆಗಳು.
4) ಅನುಮೋದಿತ ವಿನ್ಯಾಸ ನಕ್ಷೆಗಳ ಕಡತಗಳು.
5) ಭೂ ಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಲಾದ ಕಡತಗಳು.
6) ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾದ ಕಡತಗಳು.
7) ಆಯವ್ಯಯ, ನಗದು ಪುಸ್ತಕಗಳು.
8) ದಾಸ್ತಾನು ಪುಸ್ತಕ.
9) ಆಸ್ತಿ ವಹಿ.
10) ಅಧಿಕಾರಿ / ಸಿಬ್ಬಂದಿಯವರ ವೈಯಕ್ತಿಕ ಕಡತ.
11) ಆರ್.ಟಿ.ಐ / ಇತರೆ ಕಡತಗಳು.
12) ನ್ಯಾಯಾಲಯದ ಪ್ರಕರಣಗಳು.

ಮಾಹಿತಿ ಹಕ್ಕು ಅಧಿನಿಯಮ –2005 ರ ನಿಯಮಗಳ ಅಡಿಯಲ್ಲಿ ಪ್ರಾಧಿಕಾರದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು

1. ಸಕ್ಷಮ ಪ್ರಾಧಿಕಾರ / ಸಾರ್ವಜನಿಕ ಮಾಹಿತಿ ಅಧಿಕಾರಿ (PIO) – ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು, ನೆಲಮಂಗಲ ಯೋಜನಾ ಪ್ರಾಧಿಕಾರ.

2. ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ (APIO) – ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ನೆಲಮಂಗಲ ಯೋಜನಾ ಪ್ರಾಧಿಕಾರ.
3. ಅಪೀಲು ಪ್ರಾಧಿಕಾರ – ಸದಸ್ಯ–ಕಾರ್ಯದರ್ಶಿ, ನೆಲಮಂಗಲ ಯೋಜನಾ ಪ್ರಾಧಿಕಾರ.

ಅಂತರ್ ಜಾಲ (website):

ನೆಲಮಂಗಲ ಯೋಜನಾ ಪ್ರಾಧಿಕಾರದ ಮಾಹಿತಿಯು ಅಂತರ್‌ಜಾಲ **website:www.nelamangala.tpa.gov.in** ರಲ್ಲಿ ಲಭ್ಯವಿದ್ದು, ವಿವರಗಳು ಪಾರದರ್ಶಕವಾಗಿ ದೊರೆಯುವಂತೆ ಮಾಡಲಾಗಿದೆ. ಹಾಗೂ ನೆಲಮಂಗಲ ಯೋಜನಾ ಪ್ರಾಧಿಕಾರದ ಕಛೇರಿಯು 2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸಾರ್ವಜನಿಕ ಮಾಹಿತಿಗಾಗಿ ಸೌಲಭ್ಯಗಳು:

ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಪ್ರಮುಖ ವಿಷಯಗಳ ಕುರಿತಂತೆ ಪ್ರಕಟಣೆಗಳನ್ನು ಹಾಗೂ ಮಾಹಿತಿಗಳನ್ನು ಸೂಚನಾ ಫಲಕದಲ್ಲಿ ಸಾರ್ವಜನಿಕರ ಗಮನಕ್ಕೆ ತರಲಾಗುತ್ತಿದೆ.

1. **ಭೂ ಪರಿವರ್ತನೆ :** ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯೊಳಗೆ ಬರುವ ಜಮೀನುಗಳ ಭೂ ಪರಿವರ್ತನೆ ಬಗ್ಗೆ ಅಭಿಪ್ರಾಯ ನೀಡಲು ಮಾನ್ಯ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತಿದ್ದು, ಸದರಿ ಪ್ರಕರಣಗಳನ್ನು ಸರ್ಕಾರ ದಿಂದ ಅಂತಿಮ ಅನುಮೋದನೆಯಾದ ಮಹಾ ಯೋಜನೆ–2031 ರ ಭೂ ಉಪಯೋಗ ಹಾಗೂ ವಲಯ ನಿಯಮಗಳಂತೆ ಪರಿಶೀಲಿಸಿ, ಭೂ ಪರಿವರ್ತನೆಗೆ ಅಭಿಪ್ರಾಯಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ಕಂದಾಯ ಇಲಾಖೆಯಿಂದ ಈ ಪ್ರಾಧಿಕಾರದಲ್ಲಿ ವ್ಯವಸಾಯದ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗೆ ಭೂಪರಿವರ್ತನೆ ಮಾಡುವ ಬಗ್ಗೆ **882** ಪ್ರಕರಣಗಳಿಗೆ ಅಭಿಪ್ರಾಯ ನೀಡಲಾಗಿದೆ.

2. **ವಿನ್ಯಾಸ ಅನುಮೋದನೆ:** ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯೊಳಗೆ ಬರುವ ಜಮೀನುಗಳಿಗೆ ಉದ್ದೇಶಿತ ಉಪಯೋಗಕ್ಕೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಪಡೆದ ಭೂ ಪರಿವರ್ತನಾ ಆದೇಶ ಹಾಗೂ ದಾಖಲಾತಿಗಳೊಂದಿಗೆ ಅರ್ಜಿದಾರರು ಪ್ರಾಧಿಕಾರಕ್ಕೆ ವಿನ್ಯಾಸ ಅನುಮೋದನೆ ಕೋರಿ ಅರ್ಜಿ ಸಲ್ಲಿಸುತ್ತಾರೆ. ಈ ರೀತಿ ಸ್ವೀಕೃತಿಗೊಂಡ ಅರ್ಜಿಗಳನ್ನು ನಿಯಮಾವಳಿಗಳನ್ವಯ ಪ್ರಾಧಿಕಾರದಲ್ಲಿ ತಾಂತ್ರಿಕವಾಗಿ ಪರಿಶೀಲಿಸಿದ ನಂತರ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಿ ಸಭೆಯ ಆಡಳಿತಾತ್ಮಕ ಅನುಮೋದನೆ ಪಡೆದು, ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 ರಂತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ತಾತ್ಕಾಲಿಕ ಅನುಮೋದನೆ ನೀಡಲಾಗುತ್ತಿದೆ. ಸರ್ಕಾರದ ಸುತ್ತೋಲೆಯಂತೆ ವಸತಿ ಬಡಾವಣೆ ಮಾಲೀಕರು ವಿನ್ಯಾಸದಲ್ಲಿನ ಎಲ್ಲಾ ಸಿವಿಲ್ ಕಾಮಗಾರಿಗಳು ಅಂದರೆ (ರಸ್ತೆ, ಸಿಡಿ ವರ್ಕ್ ಹಾಗೂ ಚರಂಡಿ ಕೆಲಸಗಳು) ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿ ಸಂಬಂಧಿಸಿದ ಇಲಾಖೆಗಳಿಂದ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಗೊಳಿಸಿರುವ ಬಗ್ಗೆ ಧೃಢೀಕರಣ ಪತ್ರ / ಪ್ರಮಾಣ ಪತ್ರಗಳನ್ನು ಪ್ರಾಧಿಕಾರಕ್ಕೆ ಹಾಜರುಪಡಿಸಿ ವಿನ್ಯಾಸದಲ್ಲಿ ಶೇ.100% ರಷ್ಟು ನಿವೇಶನಗಳ ಬಿಡುಗಡೆ ಕೋರಿ ಅರ್ಜಿ ಸಲ್ಲಿಸುತ್ತಾರೆ. ಉದ್ಯಾನವನ / ಬಯಲು ಮತ್ತು ರಸ್ತೆಗಳನ್ನು ಸಂಬಂಧಿತ ಸ್ಥಳೀಯ ಸಂಸ್ಥೆಗೆ ಮುಫತ್ತಾಗಿ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಿದ ನಂತರ ನಾಗರೀಕ ಸೌಲಭ್ಯದ ನಿವೇಶನ ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ನಂತರ ಪ್ರಾಧಿಕಾರದಿಂದ ಸದರಿ ವಿನ್ಯಾಸವನ್ನು ಅನುಮೋದಿತ ನಕ್ಷೆಯಂತೆ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿದ ಬಗ್ಗೆ ಪರಿವೀಕ್ಷಣೆ ಕೈಗೊಂಡು ಖಚಿತಪಡಿಸಿಕೊಂಡು ಶೇ.100% ರಷ್ಟು ನಿವೇಶನಗಳನ್ನು ಪ್ರಾಧಿಕಾರದ ವತಿಯಿಂದ ಬಿಡುಗಡೆಗೊಳಿಸಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತದೆ. ಪ್ರಸ್ತುತ ಸಾಲಿನಲ್ಲಿ ಕೆಳಕಂಡ ಪ್ರಕರಣಗಳಿಗೆ ಅನುಮೋದನೆ ನೀಡಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಕಳುಹಿಸಲಾಗಿದೆ.

ಕ್ರ.ಸಂ	ವಿನ್ಯಾಸದ ವಿವರ	ಸಂಖ್ಯೆ
1.	ಏಕ ನಿವೇಶನ	18
2.	ಬಹು ನಿವೇಶನ	22

ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2015 ರಂತೆ ಅನುಮೋದಿತ ವಿನ್ಯಾಸದಲ್ಲಿನ ನಿವೇಶನಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

3. **ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ :** ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಕಟ್ಟಡ ಕಟ್ಟಲು ಉದ್ದೇಶಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 15 ರಂತೆ ಪ್ರಾರಂಭಿಕ ಪ್ರಮಾಣ ಪತ್ರ ಕೋರಿ ಸಲ್ಲಿಸಿದ ಅರ್ಜಿಗಳನ್ನು, ಅನುಮೋದಿತ ವಲಯ ನಿಯಮಾವಳಿಯಂತೆ ತಾಂತ್ರಿಕವಾಗಿ ಪರಿಶೀಲಿಸಿ, ಪ್ರಾಧಿಕಾರದ ಅಭಿಪ್ರಾಯದೊಂದಿಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುತ್ತಿದೆ. ಅದೇ ರೀತಿ ನೆಲಮಂಗಲ ನಗರಸಭೆಯ ವ್ಯಾಪ್ತಿ ಪ್ರದೇಶದಲ್ಲಿ ಕಟ್ಟಡ ಕಟ್ಟಲು ಸಾರ್ವಜನಿಕರಿಂದ ಸ್ವೀಕರಿಸಲಾಗುವ ಪ್ರಕರಣಗಳಿಗೆ ತಾಂತ್ರಿಕ ಅಭಿಪ್ರಾಯವನ್ನು ನಗರಸಭೆಯಿಂದ ಕೋರಲಾಗುತ್ತಿದ್ದು, ಅಂತಹ ಪ್ರಕರಣಗಳನ್ನು ಪರಿಶೀಲಿಸಿ ತಾಂತ್ರಿಕ ಅಭಿಪ್ರಾಯವನ್ನು ನೀಡಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ **104** ಪ್ರಕರಣಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿದೆ.

4. **ಮಹಾಯೋಜನೆ (M.P):** ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆ–2031 ಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 ರ ಕಲಂ 13 (3) ರನ್ವಯ ಸರ್ಕಾರದ ಆದೇಶ ಸಂಖ್ಯೆ. ನಅಇ:150:ಬಿಎಂಆರ್:2013 ಬೆಂಗಳೂರು ದಿನಾಂಕ:01–06–2015 ರಲ್ಲಿ ಅಂತಿಮ ಅನುಮೋದನೆ ನೀಡಲಾಗಿದೆ.

ಪ್ರಸ್ತುತ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸೋಲೂರು ಟೌನ್‌ಶಿಪ್‌ಗೆ ಒಳಪಡುವ 11 ಗ್ರಾಮಗಳಿಗೆ ಮಹಾಯೋಜನೆ ತಯಾರಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ:148:ಬಿ.ಎಂ.ಆರ್ :2021(ಇ):ಬೆಂಗಳೂರು ದಿನಾಂಕ:22–03–2022 ರಲ್ಲಿ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಸೋಲೂರು ಉಪನಗರ ಪ್ರದೇಶದ 11 ಗ್ರಾಮಗಳಿಗೆ (27.79 ಚ.ಕಿ.ಮೀ) ಹಾಲಿ ಭೂ ಉಪಯೋಗ ದಿನಾಂಕವನ್ನು ನಿಗದಿಪಡಿಸಲಾಗಿರುತ್ತದೆ ಹಾಗೂ ಹಾಲಿ ಭೂ ಉಪಯೋಗ ನಕ್ಷೆಗಳನ್ನು ತಯಾರಿಸಲಾಗಿರುತ್ತದೆ. ಸೋಲೂರು ಉಪನಗರ ಪ್ರದೇಶದ 11 ಗ್ರಾಮಗಳಿಗೆ ಮಹಾಯೋಜನೆ ತಯಾರಿಕೆ ಸಂಬಂಧ ಈಗಾಗಲೇ ಹಾಲಿ ಭೂ ಉಪಯೋಗ, Climatelogy, Demography ಮತ್ತು ಉದ್ದೇಶಿತ ರಸ್ತೆ ಪರಿಚಲನಾ ನಕ್ಷೆಗಳನ್ನು ತಯಾರಿಸಲಾಗಿದ್ದು, ಉದ್ದೇಶಿತ ಭೂ ಉಪಯೋಗ ನಕ್ಷೆಯನ್ನು ತಯಾರಿಸಲು ಕ್ರಮ ವಹಿಸಲಾಗುತ್ತಿದೆ.

ಪ್ರಾಧಿಕಾರದ ಸಭೆಗಳು

ಪ್ರಸ್ತುತ ಸಾಲಿನಲ್ಲಿ ಪ್ರಾಧಿಕಾರದಲ್ಲಿ ನಡೆಸಲಾಗಿರುವ ಸಭೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಸಭೆಗಳಲ್ಲಿ ಕೈಗೊಂಡ ತೀರ್ಮಾನಗಳನ್ನು ನಿಯಮಾನುಸಾರ ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಕ್ರ.ಸಂ	ಪ್ರಾಧಿಕಾರದ ಸಭೆಯ ದಿನಾಂಕ	ಪ್ರಾಧಿಕಾರದ ಸಭೆಯ ಸಂಖ್ಯೆ
1.	18–07–2022	110 ನೇ ಸಭೆ
2.	10–11–2022	111 ನೇ ಸಭೆ
3.	11–01–2023	112 ನೇ ಸಭೆ
4.	27–02–2023	113 ನೇ ಸಭೆ
5.	20–03–2023	114 ನೇ ಸಭೆ
	ಒಟ್ಟು	05

ನೆಲಮಂಗಲ ಯೋಜನಾ ಪ್ರಾಧಿಕಾರದ ಕಛೇರಿಯ ಸಿಬ್ಬಂದಿ ವಿವರ

ಸರ್ಕಾರದ ಆದೇಶದಂತೆ ನೆಲಮಂಗಲ ಯೋಜನಾ ಪ್ರಾಧಿಕಾರದ ಕಛೇರಿಯು ದಿನಾಂಕ:31–08–2001 ರಿಂದ ಕಾರ್ಯಾರಂಭ ಆಗಿದ್ದು, ಪ್ರಸ್ತುತ 2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಅಧ್ಯಕ್ಷರು ಕಛೇರಿಯ ಮುಖ್ಯಸ್ಥರಾಗಿದ್ದು, ಸದಸ್ಯ–ಕಾರ್ಯದರ್ಶಿಗಳು ಪ್ರಾಧಿಕಾರದ ಕಾರ್ಯನಿರ್ವಹಣಾಧಿಕಾರಿಗಳಾಗಿದ್ದು, ಕಛೇರಿಯ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ 1) ನಅಇ:91:ಬೆಂರೂಪ್ರಾ:01:ಬೆಂಗಳೂರು, ದಿನಾಂಕ:11–05–2001, 2) ನಅಇ:273:ಬಿಎಂಆರ್:2009, ಬೆಂಗಳೂರು ದಿನಾಂಕ:13–10–2009, ಮತ್ತು 3) ನಅಇ:57:ಬಿಎಂಆರ್: 2010, ಬೆಂಗಳೂರು ದಿನಾಂಕ:06–10–2010 ರಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಈ ಕೆಳಕಂಡ ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಿ ಈ ಹುದ್ದೆಗಳನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ನಿಯೋಜನೆ ಮೇಲೆ ನೇಮಕ ಮಾಡಲು ಸೂಚಿಸಿದೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ: ನಅಇ:93ನೆಯೋಸೇ:2009 ಬೆಂಗಳೂರು ದಿನಾಂಕ:26–08–2009 ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರನ್ನು ಸದಸ್ಯ–ಕಾರ್ಯದರ್ಶಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ. ಅದರಂತೆ ಮಂಜೂರಾದ / ಭರ್ತಿ ಆಗಿರುವ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ಮಂಜೂರಾದ / ಭರ್ತಿ ಆಗಿರುವ ಹುದ್ದೆಗಳ ವಿವರ

ಕ್ರ ಸಂ.	ಹುದ್ದೆಯ ಪದನಾಮ	ಮಂಜೂರಾದ ಹುದ್ದೆ	ಭರ್ತಿ ಆಗಿರುವ ಹುದ್ದೆ	ಖಾಲಿ ಇರುವ ಹುದ್ದೆ
1.	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ	01	01	–
2.	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	01	01	–
3.	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	01	01	–
4.	ನಗರ ಯೋಜಕರು	02	01	01
5.	ಸಹಾಯಕ ನಗರ ಯೋಜಕರು	01	–	01
6.	ಪ್ರಥಮ ದರ್ಜೆ ಸಹಾಯಕರು	01	01	–
7.	ಬೆರಳಚ್ಚುಗಾರರು	01	–	01
8.	ಗ್ರೂಪ್ 'ಡಿ'	01	01	–
	ಒಟ್ಟು	**09**	**06**	**03**

ಪ್ರಾಧಿಕಾರದ ದೈನಂದಿನ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ಪ್ರಾಧಿಕಾರದ ಅನುಮೋದನೆಯೊಂದಿಗೆ ಬಾಹ್ಯ ಮೂಲದಿಂದ (Out Source) ಈ ಕೆಳಕಂಡ ನೌಕರರ ಸೇವೆಯನ್ನು ಪಡೆಯಲಾಗುತ್ತಿದೆ.

ಬಾಹ್ಯ ಮೂಲದಿಂದ (Out Source) ಸೇವೆ ಪಡೆದಿರುವ ನೌಕರರ ವಿವರ

1.	ತಾಂತ್ರಿಕ ಸಹಾಯಕ	02
2.	ಕಂಪ್ಯೂಟರ್ ಆಪರೇಟರ್ ಕಮ್	02

	ಟೈಪಿಸ್ಟ್	
3.	ಡಾಟಾ ಎಂಟ್ರಿ ಆಪರೇಟರ್	01
4.	ಗ್ರೂಪ್ 'ಡಿ'	03
5.	ಕಛೇರಿ ಸ್ವಚ್ಛತೆ ಸಿಬ್ಬಂದಿ	01

ಹಾಗೂ ಪ್ರಾಧಿಕಾರದ ಅಧ್ಯಕ್ಷರ ಕಛೇರಿಯ ಸಹಾಯಕ್ಕಾಗಿ ಬಾಹ್ಯ ಮೂಲದಿಂದ (Out Source) ಈ ಕೆಳಕಂಡ ನೌಕರರ ಸೇವೆಯನ್ನು ಪಡೆಯಲಾಗುತ್ತಿದೆ.

1.	ಆಪ್ತ ಸಹಾಯಕ	01

ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸುವ ಬಗ್ಗೆ

ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ, ನೆಲಮಂಗಲ ಗ್ರಾಮ ಸ.ನಂ.213 ರಲ್ಲಿನ 10 ಎಕರೆ–23 ಗುಂಟೆ ಜಮೀನಿನ ಅನುಮೋದಿತ ವಿನ್ಯಾಸದಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ 2142.28 ಚ.ಮೀ ವಿಸ್ತೀರ್ಣದ ನಿವೇಶನದಲ್ಲಿ ಪ್ರಾಧಿಕಾರದ ಕಛೇರಿ ಕಟ್ಟಡ ನಿರ್ಮಿಸುವ ಬಗ್ಗೆ ದಿನಾಂಕ:09–10–2009 ರಂದು ಜರುಗಿದ 41ನೇ ಪ್ರಾಧಿಕಾರದ ಸಭೆಯಲ್ಲಿ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ತೀರ್ಮಾನಿಸಲಾಗಿತ್ತು. ಕಛೇರಿ ಕಟ್ಟಡವನ್ನು ಅಧಿಕೃತ ಸರ್ಕಾರಿ ಸಂಸ್ಥೆ ಮುಖಾಂತರ ಅನುಷ್ಟಾನಗೊಳಿಸುವ ನಿಟ್ಟಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸಲ್ಲಿಸಲಾದ ರೂ 1,25,00,000–00 (ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ಗಳ ಅಂದಾಜು ಪಟ್ಟಿ ಮತ್ತು ರೂ.9,50,000–00 ಗಳ ಅಂದಾಜು ಪಟ್ಟಿಗೆ ಅನುಮೋದನೆ ನೀಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರದ ಆದೇಶ ಸಂಖ್ಯೆ:ನಅಇ:333:ಬಿಎಂಆರ್:2010 ಬೆಂಗಳೂರು ದಿನಾಂಕ:03–12–2010 ರಲ್ಲಿ ಮತ್ತು ನಅಇ:44: ಬಿಎಂಆರ್:2015 ದಿನಾಂಕ:24–06–2015 ರಲ್ಲಿ ಪ್ರಾಧಿಕಾರಕ್ಕೆ ಸ್ವಂತ ಕಟ್ಟಡ ನಿರ್ಮಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ. ಅದರಂತೆ ಕಟ್ಟಡ ನಿರ್ಮಿಸಿ ದಿನಾಂಕ:11–11–2015 ರಂದು ಕಟ್ಟಡವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ್ದು, ಪ್ರಸ್ತುತ ಸದರಿ ಕಟ್ಟಡದಲ್ಲಿ ಪ್ರಾಧಿಕಾರವು ಕಾರ್ಯನಿರ್ವಹಿಸುತ್ತಿದೆ.

ಪ್ರಾಧಿಕಾರದ ಆಯ ವ್ಯಯ (Budget)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 68 (ಬಿ) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965 ರ ಸೆಕ್ಷನ್ 22 ರನ್ವಯ ನೆಲಮಂಗಲ ಯೋಜನಾ ಪ್ರಾಧಿಕಾರದ 2023–24 ನೇ ಸಾಲಿನ ಅಂದಾಜು ಆಯ ವ್ಯಯವನ್ನು ತಯಾರಿಸಿ ದಿನಾಂಕ:27–02–2023 ರಂದು ನಡೆದ ಪ್ರಾಧಿಕಾರದ 113 ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಪಡೆದು, ಆಯವ್ಯಯವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ.ನಅಇ:447:ಮೈಅಪ್ರಾ:2016 ದಿನಾಂಕ:19–04–2017 ರನ್ವಯ ಅನುಮೋದನೆಗಾಗಿ ದಿನಾಂಕ:17–03–2023 ರಲ್ಲಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆ. ಸದರಿ ಆಯವ್ಯಯದಲ್ಲಿ 2023–24 ನೇ ಸಾಲಿಗೆ ರೂ.107,98,17,002–00 ಗಳ ಆದಾಯ ಅಂದಾಜಿಸಲಾಗಿದೆ. ಅದೇ ರೀತಿ ರೂ.66,34,35,000–00 ಗಳನ್ನು ಕಚೇರಿ ವೆಚ್ಚ ಮಾಡಲು ಅಂದಾಜಿಸಲಾಗಿದೆ.

ಪ್ರಾಧಿಕಾರದ ಆದಾಯ ಮತ್ತು ವೆಚ್ಚಗಳು

2022–23 ನೇ ಸಾಲಿನ ಆದಾಯ ಮತ್ತು ವೆಚ್ಚಗಳು ಈ ಕೆಳಕಂಡಂತಿರುತ್ತವೆ.

ಕ್ರ.ಸಂ.	ತಿಂಗಳು	ಆದಾಯ (ರೂ.ಗಳಲ್ಲಿ)	ವೆಚ್ಚ (ರೂ.ಗಳಲ್ಲಿ)
1.	ಏಪ್ರಿಲ್ – 2022	1,15,85,722–50	33,57,798–15
2.	ಮೇ – 2022	2,77,93,280–00	10,24,064–65

3.	ಜೂನ್ – 2022	92,06,937–00	1,12,19,694–35
4.	ಜುಲೈ – 2022	23,28,13,125–00	22,38,02,725–65
5.	ಆಗಸ್ಟ್ – 2022	69,81,308–00	7,06,854–60
6.	ಸೆಪ್ಟೆಂಬರ್ – 2022	27,11,363–00	10,43,751–45
7.	ಅಕ್ಟೋಬರ್– 2022	39,69,285–00	15,68,288–65
8.	ನವೆಂಬರ್ – 2022	56,12,764–00	50,49,180–60
9.	ಡಿಸೆಂಬರ್ – 2022	3,46,64,592–00	10,66,400–80
10.	ಜನವರಿ – 2023	1,02,55,004–00	14,85,571–65
11.	ಫೆಬ್ರವರಿ – 2023	1,57,53,919–00	20,29,823–60
12.	ಮಾರ್ಚ್ – 2023	4,96,12,415–00	13,49,983–60

2021–22 ನೇ ಸಾಲಿನ ಲೆಕ್ಕ ತನಿಖಾ ವರದಿ ಬಗ್ಗೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 68 (ಸಿ) (2) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965 ರ ನಿಯಮ 23 (2) ರಂತೆ ನೆಲಮಂಗಲ ಯೋಜನಾ ಪ್ರಾಧಿಕಾರದ 2021–22 ನೇ ಸಾಲಿನ ಲೆಕ್ಕ ತನಿಖೆಯನ್ನು ಜಂಟಿ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಬೆಂಗಳೂರು ಇವರು ದಿನಾಂಕ:23–05–2022 ರಿಂದ 31–05–2022 ರವರೆಗೆ ಕೈಗೊಂಡಿದ್ದು, ಲೆಕ್ಕ ತನಿಖಾ ವರದಿಯನ್ನು ಈ ಕಛೇರಿಯಲ್ಲಿ ದಿನಾಂಕ:19–07–2022 ರಂದು ಸ್ವೀಕರಿಸಲಾಗಿದೆ.

2021–22 ನೇ ಸಾಲಿನ ಲೆಕ್ಕ ತನಿಖಾ ವರದಿ ಬಗ್ಗೆ ಅನುಸರಣಾ ವರದಿಯನ್ನು ತಯಾರಿಸಿ ದಿನಾಂಕ:11–01–2023 ರಂದು ನಡೆದ ಪ್ರಾಧಿಕಾರದ 112 ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:112.11.2 ರಲ್ಲಿ ಮಂಡಿಸಿ ಅನುಮೋದನೆ ಪಡೆದು, ಜಂಟಿ ನಿರ್ದೇಶಕರು, ಜಂಟಿ ನಿರ್ದೇಶಕರ ಕಛೇರಿ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ರವರಿಗೆ ದಿನಾಂಕ:21–03–2023 ರಲ್ಲಿ ಸಲ್ಲಿಸಲಾಗಿದೆ. ಲೆಕ್ಕ ತನಿಖಾ ವರದಿಯಲ್ಲಿನ ಪ್ರಮುಖ ನ್ಯೂನತೆ / ಆಕ್ಷೇಪಣೆ / ವಸೂಲಾತಿ ಬಗ್ಗೆ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ನೆಲಮಂಗಲ ಯೋಜನಾ ಪ್ರಾಧಿಕಾರದ 2021–22 ನೇ ಸಾಲಿನ ವರ್ಗೀಕೃತ ಜಮಾ ಹಾಗೂ ಖರ್ಚಿನ ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಲಾಗಿದೆ.

18/03/2023

ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ ಸದಸ್ಯ–ಕಾರ್ಯದರ್ಶಿ
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

ಅನುಬಂಧ–1

ನೆಲಮಂಗಲ ಯೋಜನಾ ಪ್ರಾಧಿಕಾರದ 2021–22 ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದ ಪ್ರಮುಖ ನ್ಯೂನತೆಗಳು ಹಾಗೂ ಆಕ್ಷೇಪಣಾ ಮತ್ತು ವಸೂಲಾತಿ ಮೊತ್ತಗಳ ವಿವರಗಳು.

ಕ್ರ.ಸಂ	ಕಂಡಿಕೆ ಸಂಖ್ಯೆ	ಪ್ರಮುಖವಾದ ನ್ಯೂನತೆಗಳು		ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
1.	04	ಹಿಂದಿನ ಸಾಲಿನ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸದಿರುವುದು.		–	–
2.	13	ನಿಶ್ಚಿತ ಠೇವಣಿಗಳ ಕುರಿತು		–	–
3.	18	ಉತ್ತಮತೆ ಶುಲ್ಕವನ್ನು ಯೋಜನಾ ಮಂಡಳಿಗೆ ಪಾವತಿಸದಿರುವುದು		3065370–00	–
4.	20	ಪಿಂಚಣಿ ವಂತಿಕೆ / ರಜೆ ವೇತನ ಹಾಗೂ ನೂತನ ಪಿಂಚಣಿ ವಂತಿಕೆಗಳನ್ನು ಸಂಬಂಧಿಸಿದ ನಿಧಿಗೆ ಜಮಾ ಮಾಡದಿರುವುದು		950527–00	–
5.	22	ಮಾಹಿತಿ ಹಕ್ಕು ಅರ್ಜಿ ಮೊತ್ತವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡದಿರುವುದು		2560–00	–
6.	23	M/s KRIDL ಸಂಸ್ಥೆಗೆ ಠೇವಣಿ ವಂತಿಕೆಯಾಗಿ ಪಾವತಿಸಿರುವ ಮೊತ್ತಕ್ಕೆ ಹಣ ಬಳಕೆ ಪ್ರಮಾಣ ಪತ್ರ ಮತ್ತು ಇತರೆ ದಾಖಲೆಗಳನ್ನು ಒದಗಿಸದಿರುವುದು		1800000–00	–
7.	24	ಕಟ್ಟಡ ನಕ್ಷೆ ಅನುಮೋದನೆ ಸಂಬಂಧ ಸೆಸ್ ಮೊತ್ತವನ್ನು ವಸೂಲಿಸದೆ ಇರುವುದು		–	10980–00
8.	28	ಶುಲ್ಕಗಳ ವಸೂಲಾತಿ ಬಗ್ಗೆ		–	–
9.	28(iii)	ಸೆಸ್ & ಸರ್‌ಚಾರ್ಜ್ ಜಮಾ ಮಾಡದಿರುವುದು	ನೀರು ಸರಬರಾಜು ವ್ಯವಸ್ಥೆ ಅಭಿವೃದ್ಧಿ	4544135–00	
			ವರ್ತುಲ ರಸ್ತೆ ಅಭಿವೃದ್ಧಿ	4507750–00	
			ಕೊಳಚೆ ಪ್ರದೇಶಗಳ ಅಭಿವೃದ್ಧಿ	2250883–00	
			ಸಮೂಹ ಸಾರಿಗೆ ವ್ಯವಸ್ಥೆ ಅಭಿವೃದ್ಧಿ	15741957–00	
10.	35	ಲೆಕ್ಕ ಪರಿಶೋಧನಾ ಶುಲ್ಕ ಪಾವತಿಗೆ ಬಾಕಿ ಉಳಿದಿರುವುದು		308237–00	–
			ಒಟ್ಟು	**33171419–00**	**10980–00**

ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ **ಸದಸ್ಯ–ಕಾರ್ಯದರ್ಶಿ**
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

ಅನುಬಂಧ–2					
ನೆಲಮಂಗಲ ಯೋಜನಾ ಪ್ರಾಧಿಕಾರ					
2021–22 ನೇ ಸಾಲಿನ ಜಮೆ ಮತ್ತು ಖರ್ಚು ವಿವರ					
ಕ್ರ.ಸ	ಜಮೆ	ಮೊತ್ತ	ಕ್ರ.ಸ	ಖರ್ಚು	ಮೊತ್ತ
1.	ಉತ್ತಮತೆ ಶುಲ್ಕ	6,13,07,400–00	1.	ಅಧಿಕಾರಿ / ಸಿಬ್ಬಂದಿ ವೇತನ	73,00,704–00
2.	ಪರಿಶೀಲನಾ ಶುಲ್ಕ	26,28,820–00	2.	ಅಧ್ಯಕ್ಷರ / ಸದಸ್ಯರ ಗೌರವಧನ	1,44,000–00
3.	ಉಸ್ತುವಾರಿ ಶುಲ್ಕ	94,000–00	3.	ದೂರವಾಣಿ / ಬ್ರಾಡ್ ಬ್ಯಾಂಡ್ ವೆಚ್ಚ	67,632–00
4.	ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ದಾಖಲಾತಿ ನೀಡುವ ಶುಲ್ಕ	45,127–00	4.	ವಿದ್ಯುತ್ ವೆಚ್ಚ (KEB)	56,831–00
5.	ಮಾಹಿತಿ ಹಕ್ಕು ಕಾಯ್ದೆಯಡಿ ಸ್ವೀಕೃತವಾದ ಅರ್ಜಿ ಶುಲ್ಕ	2,560–00	5.	ಗಣಕ ಯಂತ್ರದ ಪ್ರಿಂಟರ್‌ಗಳಿಗೆ ಕಾಟ್ರಿಡ್ಜ್ ಖರೀದಿ / ದುರಸ್ತಿ / ವಾರ್ಷಿಕ ನಿರ್ವಹಣೆ ಗುತ್ತಿಗೆ	78,572–00
6.	ಭದ್ರತಾ ಠೇವಣಿ ಶುಲ್ಕ	30,900–00	6.	ಜೆರಾಕ್ಸ್ ಯಂತ್ರ ಖರೀದಿ ಹಾಗೂ ಟೋನರ್ ಕಾಟ್ರಿಡ್ಜ್ ಖರೀದಿ ಹಾಗೂ ದುರಸ್ತಿ	1,39,499–00
7.	ದೃಢೀಕೃತ ನಕ್ಷೆ / ದಾಖಲಾತಿ ನೀಡುವ ಶುಲ್ಕ	66,452–00	7.	ವಾಹನ ಬಾಡಿಗೆ ವೆಚ್ಚ	12,42,458–00
8.	ಕೆರೆಗಳ ಸಂರಕ್ಷಣೆ ಶುಲ್ಕ	4,03,80,300–00	8.	ಕಛೇರಿ ಕೈ ಹಣ	27,996–00
9.	ಬ್ಯಾಂಕ್ ಬಡ್ಡಿ ಬಾಬ್ತು	36,05,942–00	9.	ಅಂಚೆ ಚೀಟಿ ಖರೀದಿ	28,000–00
10.	ಸಾರ್ವಜನಿಕ / ಪತ್ರಿಕೆ ಪ್ರಕಟಣೆ ಶುಲ್ಕ	13,07,370–00	10.	ಪತ್ರಿಕೆ ಪ್ರಕಟಣೆ	14,29,969–00
11.	ಸಿ.ಎ ನೋಂದಣಿ ಶುಲ್ಕ	26,000–00	11.	ಹೊರಗುತ್ತಿಗೆ ನೌಕರರ ವೇತನ ಪಾವತಿ	18,23,465–00
12.	ನೀರು ಸರಬರಾಜು ಯೋಜನೆ ಸೆಸ್	47,83,300–00	12.	ಪ್ರಿಂಟಿಂಗ್ / ಮುದ್ರಣ	80,656–00
13.	ವರ್ತುಲ ರಸ್ತೆ ಅಭಿವೃದ್ಧಿ ಸೆಸ್	47,45,000–00	13.	ಲೇಖನಾ ಸಾಮಗ್ರಿ ಹಾಗೂ ಗಣಕಯಂತ್ರದ ಪ್ರಿಂಟರ್‌ನ ಟೋನರ್ ಕಾಟ್ರಿಡ್ಜ್ ಖರೀದಿ	1,60,637–00
14.	ಕೊಳಚೆ ನಿರ್ಮೂಲನಾ ಸೆಸ್	23,69,350–00	14.	ದೂರವಾಣಿ ಉಪಕರಣ ಖರೀದಿ	9,983–00
15.	ಎಂ.ಆರ್.ಟಿ.ಎಸ್ ಸೆಸ್	1,65,70,500–00	15.	ವಕೀಲರ ಬಿಲ್ ಪಾವತಿ	70,740–00
16.	ಸಮಾಮೇಲನ ಶುಲ್ಕ	29,000–00	16.	ಉತ್ತಮತೆ ಶುಲ್ಕದ ಶೇ.5 ರಷ್ಟು ಮೊತ್ತ KSTPB ಗೆ ಪಾವತಿ	9,98,395–00
17.	ವಿಭಜನೆ ಶುಲ್ಕ	80,200–00	17.	IT / TDS ಪಾವತಿ	5,44,252–00
18.	ಪ್ರಾಧಿಕಾರದ ಬ್ಯಾಂಕ್ ಆಫ್ ಬರೋಡ ಖಾತೆ ಖಾತೆ ಸಂಖ್ಯೆ 67180100010295 ರಿಂದ ಬ್ಯಾಂಕ್ ಆಫ್ ಬರೋಡ ಖಾತೆ ಖಾತೆ ಸಂಖ್ಯೆ 67180100010478 ಖಾತೆಗೆ ವರ್ಗಾವಣೆ ಮೂಲಕ	5,000–00	18.	ಹಿಂಪಾವತಿ / ಮರುಪಾವತಿ	54,385–00

	ಜಮೆ ಮಾಡಲಾದ ಮೊತ್ತ				
19.	IT / TDS ಮೊತ್ತ ಮರುಪಾವತಿ	31,74,440–00	19.	ಅಲ್ಯೂಮಿನಿಯಂ ಪಾರ್ಟಿಷನ್ ಮಾಡಿಸಿದ ವೆಚ್ಚ	88,161–00
20.	ರಜಾ ವೇತನ ನಗಧೀಕರಿಸದೆ ಹಿಂದಿರುಗಿಸಿರುವ ಬಾಬ್ತು	5,32,387–00	20.	ನಗದಾಗದೆ ಬ್ಯಾಂಕ್‌ನಿಂದ ಹಿಂದಿರುಗಿಸಿರುವ ಡಿಡಿಗಳ ಬಾಬ್ತು	2,46,400–00
21.	ದಂಡ	1,41,22,100–00	21.	DSC Key ವೆಚ್ಚ	4,500–00
22.	ಎನ್.ಪಿ.ಎಸ್ ಮೊತ್ತ	34,268–00	22.	GST ಪಾವತಿ	63,480–00
23.	ಪ್ರಾಧಿಕಾರದ ಅಕ್ರಮ–ಸಕ್ರಮ ಖಾತೆ ಸಂಖ್ಯೆ:67180100010478 ರಲ್ಲಿ ಹತ್ತು ವರ್ಷಗಳಿಂದ ವ್ಯವಹರಿಸದೇ ಇರುವುದರಿಂದ ಸದರಿ ಖಾತೆಯಲ್ಲಿರುವ ಮೊತ್ತವನ್ನು DEAF ಖಾತೆಗೆ ವರ್ಗಾಯಿಸಿರುವ ಮೊತ್ತ ಮರುಪಾವತಿ	19,016–00	23.	UPS Service / Maintenance	2,124–00
24.	ವಕೀಲರು ಚೆಕ್ ನಗಧೀಕರಿಸದೆ ಹಿಂತಿರುಗಿಸಿದ ಬಾಬ್ತು	7,920–00	24.	KSWAN Connection ಬಾಬ್ತು	1,43,781–00
25.	ಪಕ್ವವಾದ ನಿಶ್ಚಿತ ಠೇವಣಿ ಮೊತ್ತ ಖಾತೆಗೆ ಜಮೆ	55,73,73,755–00	25.	ಚೆಕ್‌ಬುಕ್, ಆರ್‌ಟಿಜಿಎಸ್, ಎಸ್‌ಎಂಎಸ್ ಅಲರ್ಟ್, NEFT, Pord Customer Payment, Transaction ಹಾಗೂ Outward ಚಾರ್ಜ್	3,493–24
			26.	ಪ್ರಾಧಿಕಾರದ ಬ್ಯಾಂಕ್ ಆಫ್ ಬರೋಡ ಖಾತೆ ಯಿಂದ ಬ್ಯಾಂಕ್ ಆಫ್ ಬರೋಡ ಖಾತೆಗೆ ವರ್ಗಾವಣೆ ಮೂಲಕ ಜಮೆ ಮಾಡಲಾದ ಮೊತ್ತ	5,000–00
			27.	Chartered Accountant Proffessional charges	1,97,160–00
			28.	Fabrication ವೆಚ್ಚ	53,773–00
			29.	E-Vinyasa software Development & Maintenance	1,43,000–00
			30.	ಅಭಿವೃದ್ಧಿ ಕಾಮಗಾರಿ ವೆಚ್ಚ (Civil Works)	18,00,000–00
			31.	ವೈದ್ಯಕೀಯ ಉಪಕರಣ ಖರೀದಿ ಸಂಬಂಧ ವೆಚ್ಚ	2,70,300–00
			32.	ನಕ್ಷೆಗಳ ಜೆರಾಕ್ಸ್ ಹಾಗೂ ಸ್ಕ್ಯಾನ್	25,058–00
			33.	ಎನ್.ಪಿ.ಎಸ್ ಪಾವತಿ	69,488–00

	ಒಟ್ಟು ಜಮೆ	71,33,41,107–00		ಒಟ್ಟು ಖರ್ಚು	1,73,73,892–24
	ಪ್ರಾರಂಭಿಕ ಶಿಲ್ಕು (ನಗದು ಪುಸ್ತಕದಂತೆ)	6,51,26,133–77		ಅಂತಿಮ ಶಿಲ್ಕು (ನಗದು ಪುಸ್ತಕದಂತೆ)	76,10,93,348–53
	ಒಟ್ಟು ಜುಮ್ಲಾ	77,84,67,240–77		ಅವ್ಯೆರು ಶಿಲ್ಕು	77,84,67,240–77

ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ ಸದಸ್ಯ–ಕಾರ್ಯದರ್ಶಿ
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

Nelamangala Planning Authority

Annual Report for the year 2022-23

(For the Period From:01-04-2022 to 31-03-2023)

2nd Main Road, Sadashivanagar, Nelamangala-562123
Bangalore Rural District
Web. www.nelamangala.tpa.gov.in

Introduction

Nelamangala Planning Authority is one of the planning Authorities functioning under the State Government which is constituted as per the Karnataka Town & Country Planning Act, 1961 and the Karnataka Planning Authority Rules, 1965. The Planning Authority is working in its own building located at 2nd Main road, Sadashivanagar, Nelamangala-562123, Bengaluru Rural District. The Chairman appointed by the State government will be the head of the office & The Member Secretary, being the chief executive officer of the office will look after all the activities of the office.

Functioning of Nelamangala Planning Authority office since inception

In Bengaluru Metropolitan Region, the Nelamangala Planning Authority is located at the North-West portion of Bengaluru Rural District. Earlier the developments in the area were controlled directly under the BMRDA Act as per the structure plan approved by government. In the structure plan, Nelamangala Local Planning Area comes under the Zones of APZ-2 & in IZ-2 (P) & 3 (P). Later, The Karnataka State Government has declared the Nelamangala Local Planning Area vide Government notification No:UDD:63:TTP:1996 Dated:27-01-1997 as per the clause 4 (A) of Karnataka Town & Country Planning Act, 1961.

The Nelamangala Local Planning Area consists of 243 villages of the entire Nelamangala Taluk, 42 villages of Bengaluru North Taluk, 60 villages of Magadi Taluk, Comprising in total 345 villages in its jurisdiction. The total extent of Local Planning Area is 735 sq.km (73408.85 Hectare).

In Government Notification no.UDD:141:BMR:2015 Dated:08-12-2015, Nelamangala Local Planning Area is extended by adding 37 villages of Doddaballapura Taluk and total area consisting of 243 villages of Nelamangala Taluk, 42 villages of Bengaluru North Taluk, 60 villages of Magadi Taluk & 37 villages of Doddaballapur Taluk with a total of 382 villages in its jurisdiction. The total extent of Local Planning Area is 830.41 sq.km (83041.70 Hectare).

In Government Notification no.UDD:36:BMR:2016 Dated:24-06-2016, Satellite Town Ring Road (STRR) Local Planning Area is notified by including 64 villages & 01 part village of Nelamangala Local Planning Area. Accordingly, Nelamangala Local Planning Area consists of 205 villages of Nelamangala Taluk, 42 villages of Bengaluru North Taluk, 34 villages of Magadi Taluk & 37 villages of Doddaballapur Taluk in total 318 villages in its jurisdiction. The Total extent of Local Planning Area reduced to 68880.15 Hectare.

Thereafter In Government Notification-II no.UDD:95:BMR:2016 Dated:30-11-2017 Doddaballapur Local Planning Area has been notified by including 37 villages of Madure Hobli, Doddaballapur Taluk after segregating from Nelamangala Local Planning Area. Presently Nelamangala Local Planning Area consists of 205 villages of Nelamangala Taluk, 42 villages of Bengaluru North Taluk & 34 villages of Magadi Taluk in total 281 villages in its jurisdiction.

The Nelamangala Planning Authority is constituted in Government order no.UDD:204:TTP:1997 dated: 14-07-1997 as per the clause of Section 4-C of Karnataka Town & Country Planning Act, 1961. The Metropolitan Commissioner, Bengaluru

Metropolitan Region Development Authority, Bengaluru was the Chairman of the Planning Authority & the Assistant Director of Town & Country Planning working at BMRDA was the Member Secretary of the Planning Authority. Later, the post of the Member Secretaries of all the 06 Planning Authorities coming under the BMRDA jurisdiction is elevated to the cadre of the Joint Director of Town & Country Planning vide Government Order no.na.aa.ye.83 na.yo.se 2009, dated:25-06-2009 & the State Government have appointed the Joint Directors of the Town & Country Planning as the Member Secretaries for the Planning Authorities vide Government Order no.na.aa.ye.93 na.yo.se 2009, dated: 26.08.2009.

Government has nominated the following persons as a Chairman & Member of the Nelamangala Planning Authority in the order bearing No.UDD:87:BMR:2019 (E-Office) dated:22-10-2019, No.UDD:23:BMR:2022 (E) dated:09-03-2022, No.UDD:29:BMR:2022 (E) dated:19-04-2022 & No.UDD:131:BMR:2022(E) dated:20-01-2023. following Chairman and Officer's have worked for the period from: 01-04-2022 to 31-01-2023.

Sl. No.	Post	Name	Period
1.	Chairman	1) Sri.S.Mallaiah	Date:01-04-2022 to 31-03-2023
2.	Member-Secretary & Joint Director of Town & Country Planning	1) Smt.N.Veena 2) T.L.Lakshmipathi	Date:01-04-2022 to 15-03-2023 Date:15-03-2023 to 31-03-2023
3.	Members	1) Assistant commissioners of Doddaballapura, Bangalore North and Ramanagara Sub divisions	Date:01-04-2022 to 31-03-2023
		2) Chief executive officer coming under LPA from existing local body within this Planning Authority.	Date:01-04-2022 to 31-03-2023
		3) Sri.G.Nagaraju	Date:25-04-2022 to 31-03-2023
		4) Sri.C.L.Jagadish Prasad	Date:25-04-2022 to 31-03-2023
		5) Sri.M.N.Ram	Date:25-04-2022 to 31-03-2023
		6) Sri.Shivakumar.K.M	Date:21-01-2023 to 31-03-2023

Brief report on Nelamangala Planning Authority

The Nelamangala Local Planning Area currently consists of 205 villages of the Nelamangala Taluk, 42 villages of Bengaluru North Taluk & 34 villages of Magadi Taluk. The Local Planning Area is bounded by Tumkur District in the North, Remaining part of Magadi Taluk in the South, Doddaballapura Taluk and Remaining part of Bangalore North Taluk in the East and Tumkur District and Remaining part of Magadi Taluk in the Western portion. The Nelamangala town is at about 30 k.m from Bengaluru city. Two major national highways viz NH-4 & NH-48, Bangalore-Hubli, Bangalore-Hassan Railway lines passes through the Nelamangala Local Planning Area.

Functions & Activities of Nelamangala Planning Authority

1. Preparation of master plan for the local planning area: To conduct physical, socio & economic survey& to prepare the master plan for the local planning area & to submit the same for the approval of the government through Bengaluru Metropolitan Region Development Authority as per the Karnataka Town & Country planning act 1961 besides control of the developments & to ensure the enforcement of the master plan in the local planning area.
2. Furnishing the Technical opinion & assistance to the various concerned departments/institutions under the Karnataka Town & Country planning Act.
3. Furnishing technical opinion to the Revenue Department for conversion of agricultural lands to non-agricultural purposes.
4. Furnishing the commencement certificates to the local bodies in the jurisdiction for the construction of the buildings & as well as giving approval to the residential, commercial, industrial & other layouts in the converted lands in its jurisdiction.

Duties & functions of the Planning Authority

Sl. No	Chairman	Member-secretary	members
1.	To Conduct the Authority meeting as per the Karnataka Planning Authority Rules, 1965.	1. To Carry out Overall supervision / execution of the office works & to implement the Planning Authority meeting decisions as per the sec-4(H) of the Karnataka Town & Country Planning Act, 1961. 2. To carry out the day to day work of the Authority 3. Master plan preparation works 4. Participation in meetings held at Govt / BMRDA level 5. Handling of land conversion cases received by Revenue department. 6. Issuance of Technical Opinion / Commencement Certificate for Building Permission received from Municipal Council / Panchayat.	To Participate in the Authority meetings & to discuss the various subjects in the meeting with regard to decision making aspects.

Various goals set for the discharge of the Duties by the Planning Authority

The Planning Authority is discharging its duties as per the guidelines of the various Government orders / circulars & carries out its functions in implementing the decisions taken at the Authority meetings at various stages.

Various Acts / rules followed for discharging day to day functions of the Authority

a. The Karnataka Town & Country Planning Act, 1961.
b. The Karnataka Planning Authority rules, 1965.
c. BMRDA Act.
d. K.C.S.R Rules 1957.

Details of the Documents available at the Planning Authority office

1. Report of the Government Approved Interim Master Plan and maps.
2. Report of the Government Approved Master Plan-2031 and maps.
3. Village maps of all the villages coming under the jurisdiction of LPA.
4. Files pertaining to layouts approved by the Planning Authority.
5. Files pertaining to the technical opinion given to the revenue department regarding land conversion.
6. Files pertaining to commencement certificate of building Plan.
7. Budget & cash books.
8. Stock Register.
9. Property Register.
10. Officer's / Employees personal files.
11. RTI / Other files.
12. Court Cases

Details of the Officers designated in the Planning Authority to work under the Right to Information Act, 2005

1. Competent Authority / Public information officer - Deputy Director of Town & Country Planning, Nelamangala Planning Authority.
2. Assistant Public information officer – Assistant Director of Town & Country Planning, Nelamangala Planning Authority
3. Appellate Authority - Member Secretary, Nelamangala Planning Authority.

Planning Authority Website

The Planning Authority office is functioning at 2nd Main Road, Sadashivanagar, Nealamangala-562123, Bengaluru Rural District. All the information pertaining to the organizational setup, functions & duties of the Planning Authority are available at the Planning Authority office website www.nelamangala.tpa.gov.in

Facilities available for the information of the General public

All the informations & notifications pertaining to the Nelamangala Planning Authority office are displayed in the notice board meant for the general public.

1. **Land Conversion:** The Planning Authority is furnishing technical opinion for the conversion of the Agricultural lands from agriculture to non-agricultural purpose for

the proposals received from the office of the Honorable Deputy Commissioner, Bengaluru Rural / Bengaluru Urban District / Ramanagar District as per the provisions of Zonal Regulations & the Approved Master Plan-2031 in the Local Planning Area of Nelamangala. In the current financial year, the Planning Authority has furnished technical opinion for **882** cases to the revenue authorities for the conversion of the land from agriculture to non-agricultural purpose.

2. **Layout Approvals:** The applicants submit the application form along with Conversion Order Obtained from Honorable Deputy Commissioner for approval of layout plan and all the other necessary documents to the Planning Authority. After scrutinizing the submitted documents, the proposal will be placed in the ensuing meeting of Planning Authority to get the administrative approval for the proposed layout plan. After obtaining the administrative approval, the fee notice for the remittance of the Betterment Fee, Scrutiny Fee & Lake development fee will be given to the applicants. Once the stipulated fee is paid by the applicants to the office, as per the section 17 of the Karnataka Town & Country Planning Act, 1961, the provisional approval will be given to the layout plan as per the norms to undertake development works.

   After ensuring the completion of all development works such as formation of the roads, C.D works, Drainage works, Drinking Water Connection, Electric Power Connection, Fencing & Gardening of Parks, Fencing of C.A areas, Street planting & handing over of Roads & Parks to Local bodies & C.A sites to Planning Authority at free of cost, The Planning Authority with conducting the physical inspection & verification, will accord the approval for release of 100% of sites in the Layout. In the current year Planning Authority has accorded permission as mentioned below.

SL.No	Layout Details	Number
1.	Single Plot	18
2.	Multi Plot	22

   & sent to the concerned local bodies to take up further action & action is being taken as per the Town and Country Planning (Amended) Act 2015 to release the sites of the approved layout plan.

3. **Issue of Commencement Certificates for the Construction of Buildings:** The Planning Authority issues commencement certificates in respect of the proposals received in its jurisdiction for the construction of the buildings under sec 15 of the Karnataka Town & Country Planning Act, 1961. The approved building plan along with the commencement certificates will be sent to the concerned local body to take up further action at their end and also Technical opinion is furnished to the City Municipal council, Nelamangala in respect of Building plan approval in Nelamangala Town. The Planning Authority has given **104** commencement certificates in this financial year.

4. **Master Plan (MP):** Government have accorded final approval for the Master Plan - 2031 prepared for Nelamangala Local Planning Area as per the provisions of

Karnataka Town & Country Planning Act,1961 vide Government order No:UDD:150:BMR:2013 Bengaluru, dated:01-06-2015.

Preparation of Master Plan for Solur Township consists of 11 villages of Solur Hobli is in progress. Existing landuse date has been specified by the Government as per section 5 of the KTCP Act 1961, and the existing landuse map, Study maps such as climatology, demography & other maps has been prepared & the proposed circulation pattern and preparation of proposed landuse map is in progress.

Meetings of the Planning Authority

As mentioned below the Planning Authority has conducted meetings in the current financial year. All necessary actions has been initiated by the Authority to implement the decisions taken at the authority meetings.

SL.No	Authority Meeting Dates	Authority Meeting Number
1.	18–07–2022	110th Meeting
2.	10–11–2022	111th Meeting
3.	11–01–2023	112th Meeting
4.	27–02–2023	113th Meeting
5.	20–03–2023	114th Meeting
	ಒಟ್ಟು	05

Staff details of the Nelamangala Planning Authority Office

The Nelamangala Planning Authority Office started functioning independently at Nelamangala since 31-08-2001. Presently the office is at 2nd Main Road, Sadashivanagar, Nelamangala-562123, Bengaluru Rural District. The Chairman nominated by the Government will be the head of the office and the Member Secretary of the Planning Authority being the chief executive officer looks after & supervises all the administrative and technical functions of the office.

Government vide in the orders bearing no: (1) UDD:91:Bem.ru.pra:01 Bengaluru, dated:11-05-2001 (2) UDD:273:BMR:2009 Bengaluru, dated:13-10-2009 & (3) UDD:57:BMR: 2010 Bengaluru, dated: 06-10-2010 have approved creation of the temporary posts given in the table & to fill the posts on deputation from the Department of Town & Country Planning. The Government has upgraded the existing Member Secretary post from the cadre of the Assistant Director of Town & Country Planning to the cadre of the Joint Director of Town & Country Planning vide in the order bearing no: naaa ye 93 nayo se 2009, dated: 26.08.2009.

Details of the sanctioned / filled posts in the Planning Authority office

Sl. No	Name of the Post	Sanctioned post	Filled post	Vacant post
1.	Joint Director of Town & Country Planning / Member Secretary	01	01	-
2.	Deputy Director of Town & Country Planning	01	01	-

3.	Assistant Director of Town & Country Planning	01	01	-
4.	Town Planner	02	01	0
5.	Assistant Town Planner	01	-	01
6.	First Division Assistant	01	01	-
7.	Typist	01	-	01
8.	Group 'D'	01	01	-
	Total	**09**	**06**	**03**

In order to carry out the day to day functions smoothly and effectively, the Planning Authority has outsourced the following staff with the approval of Authority.

1.	Technical Assistant	02
2.	Computer Operator cum Typist	02
3.	Data Entry Operator	01
4.	Group 'D'	03
5.	House Keeping	01

And for the official use of Chairman, the Planning Authority has outsourced the following staff.

1.	Personal Assistant	01

Construction of the Planning Authority (Own) Office building

As per the decisions of the The Planning Authority in its 41st meeting dated:09-10-2009, has submitted the proposal to the Government seeking approval for the construction of its own building in a site earmarked for civic amenities in the approved layout at Survey No.213 of Nelamangala village for an extent of 10 acres 23 guntas. The Government has accorded the approval for the construction of the Nelamangala Planning Authority office building through the Public Works Department by utilizing the Planning Authority's own fund of Rs.125 lakhs (Rupees One hundred and twenty five lakhs only) & Rs.9.5 lakhs vide in the order bearing no: naaa ye:333:BMR:2010 dated:03-12-2010 & order bearing no: naaa ye:44:BMR:2015 dated:24-06-2015. The amount has been disbursed to the Public Works Department & the construction work was completed & handed over the office building on dated:11-11-2015 to the Authority. Presently the office is working in its own building.

Budget

As per section 68 (b) of the Karnataka Town & Country Planning Act- 1961 & as per the rule 22 of the Karnataka Planning Authority Rules,1965 the Planning Authority has prepared the budget for the financial year 2023-24 & placed the subject before its 113th Authority meeting held on 27-02-2023 With the approval of the Authority, the budget has been submitted to the Deputy Commissioner, Bangalore Rural District as per Government circular no.UDD:447:My.A.Pra:2016 dated:19-04-2017 for necessary approval on 17-03-2023. In the budget an income of Rs.107,98,17,002-00 has been envisaged for the financial year 2023-24 & a sum of Rs.66,34,35,000-00 earmarked for office expenses.

Details of Income & Expenditure

Income & Expenditure details for the year 2022-23

Sl. No.	Months	Income (in Rs.)	Expenditure (in Rs.)
1.	April- 2022	1,15,85,722–50	33,57,798–15
2.	May- 2022	2,77,93,280–00	10,24,064–65
3.	June- 2022	92,06,937–00	1,12,19,694–35
4.	July- 2022	23,28,13,125–00	22,38,02,725–65
5.	August- 2022	69,81,308–00	7,06,854–60
6.	September- 2022	27,11,363–00	10,43,751–45
7.	October- 2022	39,69,285–00	15,68,288–65
8.	November- 2022	56,12,764–00	50,49,180–60
9.	December- 2022	3,46,64,592–00	10,66,400–80
10.	January- 2023	1,02,55,004–00	14,85,571–65
11.	February -2023	1,57,53,919–00	20,29,823–60
12.	March-2023	4,96,12,415–00	13,49,983–60

Audit report for the year 2021-22

The Joint Director, The Local Accounts Audit Circle, Bengaluru office team has audited the accounts & other records of Nelamangala Planning Authority Office for the financial year 2021-22 from 23-05-2022 to 31-05-2022 as per the section 68(C)(2) of the Karnataka Town & Country Planning 1961 & section 23 (2) of Karnataka Planning Authority Rules, 1965. The Audit report for the year 2021-22 has been received by the office on 19-07-2022.

Compliance report for the 2021-22 Audit observation has been prepared and palced before authority 112th meeting wide subject no.112.11.2 held on 11-01-2023 and accorded the approval & the same is submitted to the Joint Director, Joint Director office, Local Accounts Audit Circle, Bengaluru on 21-03-2023. for further action on the compliance. Statement of Audit observation report of Nelamangala Planning Auhtority is enclosed in Annexure-1.

Statement of income & expenditure for the year 2021-22 of Nelamangala Planning Authority is enclosed in annexure -2.

Joint Director
Town & Country Planning,
& **Member Secretary**,
Nelamangala Planning Authority,
Nelamangala.

Annexure-1

Major Audit Observations, Objections & Recovery amount details found in 2021-22 Audit Report of Nelamangala Planning Authority

Sl. No	Sch No	Major Observations		Objected Amount	Recovery Amount
1.	04	Non – Compliance of report for the previous year's audit report		-	-
2.	13	Fixed deposits		-	-
3.	18	Non-payment of Betterment fees to KSTPB		3065370-00	-
4.	20	Non remittance of pension, leave salary and NPS to concerned heads		950527-00	-
5.	22	RTI fees not remitted to respective accounting head		2560-00	-
6.	23	Not receiving Utilization certificate and other documents for the deposit payment made to M/s. KRIDL		1800000-00	-
7.	24	Non collection of cess fees for building plan approval		-	10980-00
8.	28	Collection of fees			
9.	28(iii)	Not depositing Cess and surcharge fees	Water supply cess	4544135-00	-
			Ring Road development	4507750-00	-
			Slum development	2250883-00	-
			MRTS development	15741957-00	-
10.	35	Audit fees payment balance		308237-00	-
			Total	**33171419-00**	**10980-00**

Joint Director
Town & Country Planning,
& Member Secretary,
Nelamangala Planning Authority,
Nelamangala

Annexure-2

Nelamangala Planning Authority					
Details of 2021-22 Receipt & Expenditure					
Sl.No	**Receipt**	**Total**	**Sl. No**	**Expenditure**	**Total**
1.	Beterment levy	6,13,07,400–00	1.	Officers / Staff Salary	73,00,704–00
2.	Scrutiny fee	26,28,820–00	2.	Chairman / Members honorary	1,44,000–00
3.	Supersivion fee	94,000–00	3.	Telephone / Broad Band Expenditure	67,632–00
4.	Documentation fee collected as per RTI Act	45,127–00	4.	Electricity Expenditure	56,831–00
5.	RTI application fee	2,560–00	5.	Purchase of cartridges for computer printer / Repair & AMC Charges	78,572–00
6.	Security deposit	30,900–00	6.	Purchase of Xerox machine, toner cartridge & repair charges	1,39,499–00
7.	Documentation & plan issuing fee	66,452–00	7.	Vehicles rent Expenditure	12,42,458–00
8.	Lake rejuvation fee	4,03,80,300–00	8.	Imprest amount	27,996–00
9.	Bank interest	36,05,942–00	9.	Postal Stamp purchase	28,000–00
10.	Paper Publication fee	13,07,370–00	10.	Paper Advertisement / Publication	14,29,969–00
11.	C.A Registration fee	26,000–00	11.	Out source employees salary	18,23,465–00
12.	Water Supply Scheme cess	47,83,300–00	12.	Printing charges	80,656–00
13.	Ring Road Development cess	47,45,000–00	13.	Stationary / Materials & Toner cartridge purchase for computer printer	1,60,637–00
14.	Slum cess	23,69,350–00	14.	Telephone instrument purchase	9,983–00
15.	MRTS cess	1,65,70,500–00	15.	Advocate bill payment	70,740–00
16.	Amalgamation fee	29,000–00	16.	5% of Beterment levy fee contribution to KSTPB	9,98,395–00
17.	Bifurcation fee	80,200–00	17.	Payment of IT / TDS	5,44,252–00
18.	Transfer of amount from Bank of Baroda account no:67180100010295 to Bank of Baroda account no:67180100010478	5,000–00	18.	Repayment	54,385–00
19.	Repayment of IT / TDS	31,74,440–00	19.	Alluminium Partition Expense	88,161–00

20.	Returned unencashed Pension / Leave Salary Contribution	5,32,387–00	20.	Unencashed DD returned from Bank	2,46,400–00
21.	Penalty	1,41,22,100–00	21.	DSC Key Charges	4,500–00
22.	NPS Amount	34,268–00	22.	GST Expenditure	63,480–00
23.	Amount Transfered to DEAF Account due to Non Transaction since 10 years of Authority Akrama–Sakrama Account no:67180100010478 has been refunded	19,016–00	23.	UPS Service / Maintenance	2,124–00
24.	Unencashed cheque returned from Advocate	7,920–00	24.	KSWAN Connection	1,43,781–00
25.	Maturity of Fixed Deposit	55,73,73,755–00	25.	Cheque book, RTGS, SMS alert, NEFT, Pord Customer payment, Transaction & Outward charges	3,493–24
			26.	Transfer of amount from Bank of Baroda bank account to Bank of Baroda bank account	5,000–00
			27.	Chartered Accountant Proffessional charges	1,97,160–00
			28.	Fabrication Expense	53,773–00
			29.	E-Vinyasa software Development & maintenance	1,43,000–00
			30.	Civil Works	18,00,000–00
			31.	Related to Medical Equipment purchase	2,70,300–00
			32.	Maps Xerox & Scan	25,058–00
			33.	NPS Payment	69,488–00
	Total Receipt	71,33,41,107–00		**Total Expenditure**	1,73,73,892–24
	Opening Balance (as per cash book)	6,51,26,133–77		**Closing Balance (as per cash book)**	76,10,93,348–53
	Grand Total	77,84,67,240–77		**Total**	77,84,67,240–77

Joint Director
Town & Country Planning,
& Member Secretary,
Nelamangala Planning Authority,
Nelamangala.